## 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ: 4695/2022**

**ಫಿರ್ಯಾದಿ :- ರಾಜ್ಯದ ಪರವಾಗಿ ಬಿಳಿಗೆರೆ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ :- ಮಹದೇವಸ್ವಾಮಿ, ಬಿನ್ ಗುರುರಾಜ, 35 ವರ್ಷ,**
**ಮರಡಿಹುಂಡಿ ಗ್ರಾಮ, ನಂಜನಗೂಡು ತಾಲ್ಲೂಕು.**

**ಆ ಪಾ ದ ನೆ**

*ಶ್ರೀ ಕಿಶೋರ್ ಕುಮಾರ್ ಎಂ., 1ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:-

**ದಿನಾಂಕ 17.04.2022 ರಂದು ರಾತ್ರಿ 23.30 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ಸರಹದ್ದಿನ ಮರಡಿಹುಂಡಿ ಗ್ರಾಮದ ಸಮುದಾಯ ಭವನದ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಒಟ್ಟು 1,229/- ರೂ. 55 ಪೈಸೆ ಬೆಲೆ ಬಾಳುವ ಒಟ್ಟು 3,150 ಮಿ.ಲೀ. ಮದ್ಯ ಇರುವ 90 ಎಂ.ಎಲ್.ನ ಹೇವರ್ಡ್ಸ್ ಚೀರ್ಸ್ ವಿಸ್ಕಿಯ 25 ಪೌಚುಗಳು ಮತ್ತು 90 ಎಂ.ಎಲ್.ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 10 ಪೌಚುಗಳನ್ನು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತಮ್ಮ ಅಕ್ರಮ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತೀರಿ ಆದ್ದರಿಂದ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುವಿರೆಂದು ಈ ಮೂಲಕ ಆಪಾದಿಸುತ್ತೇನೆ.**

**ಪ್ರಶ್ನೆ.1- ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?**

**ಉತ್ತರ :**

**ಪ್ರಶ್ನೆ.2- ನೀವು ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ?**

**ಉತ್ತರ :**

ಕೊನೆಯದಾಗಿ, ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಈ ಮೇಲೆ ಹೇಳಿದಷ್ಟು ಪ್ರಮಾಣದ ಮಧ್ಯವನ್ನು ವಿಧಿ ವಿರುದ್ಧವಾಗಿ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಕಾರಣ, ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯಿದೆ ಕಲಂ 34 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುವಿರೆಂದು ಈ ಮೂಲಕ ಆಪಾದಿಸುತ್ತೇನೆ.

ಪ್ರಶ್ನೆ.1- ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ ಃ

ಪ್ರಶ್ನೆ.2- ನೀವು ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರೋ?

ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿಃ09.05.2023 ರಂದು ದೃಢೀಕರಿಸಿದ್ದೇನೆ.)

1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ನಂಜನಗೂಡು